ಕರ್ನಾಟಕ ಸರ್ಕಾರ

ಸಂಖ್ಯೆ: ಸಂಖ್ಯೆ:ಮು.ಕಾ/ಮಕ್ಕಳ ಸಹಾಯವಾಣಿ(1098)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ. ಅಂಬೇಡ್ಕರ್ ವೀದಿ,
ಬೆಂಗಳೂರು,ದಿನಾಂಕ:25.09.2025.

**ಸುತ್ತೋಲೆ**

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ, ಅರೆಸರ್ಕಾರಿ/ಸ್ವಯಂ ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ 1098 ನಾಮ ಫಲಕವನ್ನು ಕಡ್ಡಾಯವಾಗಿ ಅಳವಡಿಸುವ ಕುರಿತು.

ಉಲ್ಲೇಖ: ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಟಿಪ್ಪಣಿ ದಿನಾಂಕ:09.09.2025.

*****

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಕರ್ನಾಟಕ ಸರ್ಕಾರದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೂ ಮಕ್ಕಳ ಸಹಾಯವಾಣಿ 1098 ಸಂಖ್ಯೆಯನ್ನು ಕಡ್ಡಾಯವಾಗಿ ಶಾಶ್ವತ ಫಲಕದಲ್ಲಿ ಪ್ರದರ್ಶಿಸಲು ಸೂಕ್ತ ನಿರ್ದೇಶನ ನೀಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರನ್ನು ಕೋರಿದ್ದು ಉಲ್ಲೇಖಿತ ಟಿಪ್ಪಣಿಯಲ್ಲಿ ಸುತ್ತೋಲೆಯನ್ನು ಹೊರಡಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಮಕ್ಕಳ ಹಕ್ಕುಗಳ ರಕ್ಷಣೆ ಇಂದಿನ ತುರ್ತು ಅಗತ್ಯವಾಗಿದೆ. ಈಗಾಗಲೇ ಅನುಷ್ಠಾನಗೊಂಡಿರುವ ಮಿಷನ್ ವಾತ್ಸಲ್ಯ ಯೋಜನೆಯೂ ಮಕ್ಕಳ ಅಭಿವೃದ್ಧಿ ಹಾಗೂ ರಕ್ಷಣೆಯ ಆದ್ಯತೆಯನ್ನು ಸಾಧಿಸುವ ಒಂದು ಮಾರ್ಗವಾಗಿದ್ದು, ಸಂಕಷ್ಟದಲ್ಲಿನ ಹಾಗೂ ಸವಾಲಿನಲ್ಲಿರುವ ಮಕ್ಕಳ ಹಿತರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿದೆ. ಇಂತಹ ಮಕ್ಕಳ ಗುರುತಿಸುವಿಕೆ, ಸಂಕಷ್ಟ ಸ್ಥಿತಿಯಲ್ಲಿ ಮಾಹಿತಿ ಹಂಚಿಕೆ ಹಾಗೂ ಪುನರ್ವಸತಿ ಸೇವೆ ಒದಗಿಸುವಲ್ಲಿ ಮಕ್ಕಳ ಸಹಾಯವಾಣಿ 1098 ಮಹತ್ವದ ಪಾತ್ರವಹಿಸುತ್ತದೆ. ಈ ಸಂಖ್ಯೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದ್ದಲ್ಲಿ ಬಾಲ್ಯವಿವಾಹ, ಬಾಲ ಕಾರ್ಮಿಕತೆ, ಸಂಕಷ್ಟದಲ್ಲಿನ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ರೀತಿಯ ಮಕ್ಕಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗಲಿದೆ.

ಬಾಲ್ಯವಿವಾಹ, ಪೋಕ್ಸೋ, ಬಾಲಗರ್ಭಿಣಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಮಕ್ಕಳ ಸಹಾಯವಾಣಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಇತ್ಯಾದಿ ಸುರಕ್ಷಿತ ಬೆಂಬಲ ವ್ಯವಸ್ಥೆ ಇರುವುದರ ಕುರಿತು ಮಕ್ಕಳಿಗೆ ಮಾಹಿತಿ ಇರಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು, ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳಿಗೂ ಸಹ ಈ ಕುರಿತು ಮಾಹಿತಿ ಇದ್ದಲ್ಲಿ ಮಕ್ಕಳಿಗೆ ಸಕಾಲದಲ್ಲಿ ಸ್ಪಂದನೆ ಮತ್ತು ಅಗತ್ಯ ಬೆಂಬಲ ಪಡೆಯಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ತಮ್ಮ ಅಧೀನದ ಎಲ್ಲಾ ಜಿಲ್ಲಾ, ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಮಟ್ಟದ ಸರ್ಕಾರಿ ಕಛೇರಿ, ಅರೆಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳಲ್ಲಿ ಮಕ್ಕಳ ಸಹಾಯವಾಣಿ 1098 ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮವಹಿಸುವಂತೆ ಸೂಚಿಸಿದೆ.

ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಪೊಲೀಸ್ ಆಯುಕ್ತರು, ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸೂಕ್ತ ಕ್ರಮಕ್ಕಾಗಿ.
5. ಕಚೇರಿ ಪ್ರತಿ.

**ಅಡಕ:**

- ಮಕ್ಕಳ ಸಹಾಯವಾಣಿ ಮಾದರಿ ಪ್ರಚಾರ ಮಾಹಿತಿ (content)

**ಪ್ರತಿಯನ್ನು ಮಾಹಿತಿಗಾಗಿ:**

- ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
- ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು.
- ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು.

# 1098
## CHILD HELPLINE
24X7

# ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ):

18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟ, ತೊಂದರೆ, ದೈಹಿಕ/ಮಾನಸಿಕ ಶಿಕ್ಷೆ, ಹಿಂಸೆ/ನಿರ್ಲಕ್ಷ್ಯ/ ತಾರತಮ್ಯ ಹಾಗೂ ಲೈಂಗಿಕ ಆಧಾರಿತ ಯಾವುದೇ ರೀತಿಯ ಶೋಷಣೆಗೆ ಒಳಗಾದರೆ ತಕ್ಷಣ

## ಚೈಲ್ಡ್ ಲೈನ್‌ಗೆ ಕರೆ ಮಾಡಿ: 1098 ಅಥವಾ 112.

ಯಾವುದೇ ಮಕ್ಕಳು ಓಡಿಹೋದರೆ, ಕಾಣೆಯಾದರೆ, ಕಳ್ಳ ಸಾಗಾಣಿಕೆಗೆ ಒಳಪಟ್ಟರೆ, ದೌರ್ಜನ್ಯಕ್ಕೊಳಗಾದರೆ, ಜೀತ ಪದ್ಧತಿಯಲ್ಲಿದ್ದರೆ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯಲ್ಲಿದ್ದರೆ, ಬಾಲ್ಯ ವಿವಾಹದ ಸಿದ್ಧತೆ ಅಥವಾ ಬಾಲ್ಯ ವಿವಾಹ ನಡೆಸಿದಲ್ಲಿ, ಭಿಕ್ಷಾಟನೆಯಲ್ಲಿದ್ದರೆ, ಬೀದಿಯಲ್ಲಿದ್ದರೆ, ನಿರಂತರ ಶಾಲೆಗೆ ಗೈರು ಹಾಜರಾದರೆ, ಯಾವುದೇ ವಿಪತ್ತಿಗೆ ಒಳಗಾದರೆ, ಮಾದಕ ವ್ಯಸನ, ಆನ್ ಲೈನ್ ಬೆದರಿಕೆ, ಜಾಲತಾಣ ಸಮಸ್ಯೆ, ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದರೆ, ಹಾಗೂ ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದರೆ ಅವರ ಸಂರಕ್ಷಣೆಗಾಗಿ

## ತಕ್ಷಣ ಕರೆ ಮಾಡಿ; 1098. ತುರ್ತು ರಕ್ಷಣೆಗಾಗಿ 112

**(ಈ ದೂರವಾಣಿ ಉಚಿತ ಹಾಗೂ ದೂರು ನೀಡಿದವರ ವಿವರ ಖಂಡಿತ ಬಹಿರಂಗವಾಗುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು).**

ಹೆಚ್ಚಿನ ಮಾಹಿತಿ ಮತ್ತು ದೂರು ನೀಡಲು ಇವರನ್ನು ಸಂಪರ್ಕಿಸಿ:

ಜಿಲ್ಲಾ ಮಕ್ಕಳ ರಕ್ಷಣಾ ಘಟಕ:____________________ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ:______

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ:_________________

ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ:______________________

ತಾಲೂಕು ಮಕ್ಕಳ ರಕ್ಷಣಾಧಿಕಾರಿ (ಶಿಶು ಅಭಿವೃದ್ಧಿ ಯೋಜನಾಧಿಕಾರಿ):________

ತಾಲೂಕು ಕಾನೂನು ಸೇವಾ ಪ್ರಾಧಿಕಾರ:_________________

ಸಖಿ (ಮಹಿಳಾ ಸಹಾಯವಾಣಿ (ಸಾಂತ್ವನ) ಕೇಂದ್ರ):______________________

ಮುಖ್ಯೋಪಾಧ್ಯಯರು/ಕಾಲೇಜ್ ಪ್ರಾಂಶುಪಾಲರು/ನಿಲಯ ಪಾಲಕರು/ ಮೇಲ್ವಿಚಾರಕರು/ಮುಖ್ಯಸ್ಥರು/ಆಡಳಿತ ಮಂಡಳಿ.
ಶಿಕ್ಷಣ ಸಂಸ್ಥೆಯ/ಇಲಾಖೆಯ ಹೆಸರು:____________________________________________________

---

*ಸೂಚನೆ:* 1. ಮೇಲಿನಂತೆ ಮಕ್ಕಳ ಸಹಾಯವಾಣಿ 1098 ಅಥವಾ 112 ಶಾಶ್ವತ ಫಲಕವನ್ನು ಎಲ್ಲಾ ಶಾಲೆ/ವಸತಿನಿಲಯ/ಶಿಕ್ಷಣ ಸಂಸ್ಥೆ/ಪದವಿ ಪೂರ್ವ ಕಾಲೇಜ್/ ಪದವಿ ಕಾಲೇಜ್/ಅಂಗನವಾಡಿ/ಎಲ್ಲಾ ಸರಕಾರಿ/ವಿವಿಧ ಇಲಾಖೆಗಳ ಅಥವಾ ಅರೆ ಸರಕಾರಿ ಕಛೇರಿಗಳ ಮುಂಭಾಗದಲ್ಲಿ ಎಲ್ಲಾ ಸಾರ್ವಜನಿಕರಿಗೆ/ಮಕ್ಕಳಿಗೆ ಕಾಣುವಂತೆ ಟಿನ್‌ನ ಬೋರ್ಡ್‌ನಲ್ಲಿ/ ಅಥವಾ ಕಟ್ಟಡದ ಗೋಡೆಯಲ್ಲಿ ಶಾಶ್ವತವಾಗಿ ಎಲ್.ಎಮ್.ಎಲ್ ಬಣ್ಣದಲ್ಲಿ ಬರೆಸಬೇಕು.

2. ಮೇಲಿನ ಇಲಾಖೆಗಳ ದೂರವಾಣಿ ಸಂಖ್ಯೆಗಳನ್ನು ನಿಮ್ಮ ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿಯಿಂದ ಪಡೆಯುವುದು.